# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:-ಬಿ12(1)/ಪಿಆರ್/394/13-14

ಆಯುಕ್ತರವರ ಕಛೇರಿ,
ಮಹಾನಗರ ಪಾಲಿಕೆಯ ಕಛೇರಿಗಳು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು ದಿನಾಂಕ: 13-08-2013.

## ಸುತ್ತೋಲೆ

ವಿಷಯ: ಪಾಲಿಕೆ ವ್ಯಾಪ್ತಿಯಲ್ಲಿ ಬರುವಂತಹ ಕಟ್ಟಡಗಳಿಗೆ ಕುಡಿಯುವ ನೀರು, ಒಳಚರಂಡಿ ಮತ್ತು ವಿದ್ಯುತ್ ಸಂಪರ್ಕಗಳಿಗಾಗಿ ಅನುಮತಿ ಇಲ್ಲದೆ ರಸ್ತೆ ಮತ್ತು ಪಾದಚಾರಿ ಮಾರ್ಗಗಳನ್ನು ಅಗೆಯುತ್ತಿರುವ ಬಗ್ಗೆ.

ಉಲ್ಲೇಖ:
1) ಪ್ರಧಾನ ಅಭಿಯಂತರರ ಆದೇಶ ಸಂಖ್ಯೆ: ಇಐಸಿ/ಇಸಿ/ಪಿಆರ್/ಎಫ್/772/209-10 ದಿನಾಂಕ: 07-09-2009.
2) ಮಾನ್ಯ ಅಯುಕ್ತರವರ ಸುತ್ತೋಲೆ ಸಂಖ್ಯೆ: ಹೆ.ನಿ.ನ.ಯೋ/ವ್ಯ/ಪಿಆರ್/1661/2011-12, ದಿನಾಂಕ: 22-09-2011/31-10-2011.
3) ಮಾನ್ಯ ಆಯುಕ್ತರ ಸುತ್ತೋಲೆ ಸಂಖ್ಯೆ ಆಆಕಾ/ಪಿಎಸ್ಆರ್(ಜಿ)/6431/12-13 ದಿನಾಂಕ: 15-11-2012.
4) ದಿನಾಂಕ: 25-07-2013ರಂದು ಮಾನ್ಯ ಉಪಲೋಕಾಯುಕ್ತರು ಮತ್ತು ಮುಖ್ಯ ಅಭಿಯಂತರರು, ಕರ್ನಾಟಕ ಲೋಕಾಯುಕ್ತ ಇವರ ಸ್ಥಳ ಪರಿಶೀಲನೆಯ ಸಮಯದಲ್ಲಿ ನೀಡಿರುವಂತಹ ಮೌಖಿಕ ಸೂಚನೆಗಳು

************

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಪಾದಚಾರಿ ಮಾರ್ಗ ಮತ್ತು ರಸ್ತೆಗಳನ್ನು ಅನುಮತಿಯಿಲ್ಲದೆ ಪದೇ ಪದೇ ಪಾದಚಾರಿ ಮಾರ್ಗ ಮತ್ತು ರಸ್ತೆಗಳ ಮೇಲ್ಭಾಗವನ್ನು ಅಗೆದು ನಂತರ ಸರಿಪಡಿಸದೆ ವಿರೂಪಗೊಳಿಸುತ್ತಾರೆ. ಇದರಿಂದ ಮಾಧ್ಯಮಗಳಲ್ಲಿ ರಸ್ತೆ ಗುಂಡಿ ಹಾಗೂ ರಸ್ತೆಗಳು ಹದಗೆಟ್ಟಿರುವ ಬಗ್ಗೆ ವರದಿಗಳು ಹಾಗೂ ಸಾರ್ವಜನಿಕರಿಂದ ದೂರುಗಳು ಬರುತ್ತಿರುತ್ತದೆ. ಈ ತರಹದ ದೂರಿನನ್ವಯ ದಿನಾಂಕ: 25-07-2013ರಂದು ಮಾನ್ಯ ಉಪ ಲೋಕಾಯುಕ್ತರು, ಮುಖ್ಯ ಅಭಿಯಂತರರು (ಲೋಕಾಯುಕ್ತ) ಮತ್ತು ಪಾಲಿಕೆಯ ಪಶ್ಚಿಮ ವಲಯದ ಮುಖ್ಯ ಅಭಿಯಂತರರು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿದ ಸಮಯದಲ್ಲಿ, ಅಲ್ಲಲ್ಲಿ ರಸ್ತೆಗಳನ್ನು ಅನುಮತಿ ಇಲ್ಲದೇ ಅಗೆದಿರುವುದು ಕಂಡುಬಂದಿರುತ್ತದೆ. ಈ ರೀತಿ ಅನುಮತಿ ಇಲ್ಲದೆ ರಸ್ತೆ, ಪಾದಚಾರಿ ಮಾರ್ಗವನ್ನು ಅಗೆಯುವ ಖಾಸಗಿ ಕಟ್ಟಡ / ನಿವೇಶನದ ಮಾಲೀಕರ ಮೇಲೆ ಕ್ರಮವಹಿಸಲು ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಅಗೆದ ಭಾಗವನ್ನು ಪುನರ್ ನಿರ್ಮಿಸಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸರಳೀಕರಣಗೊಳಿಸಲು ತಪಾಸಣೆಯ ಸಂದರ್ಭದಲ್ಲಿ ಹಾಜರಿದ್ದಂತಹ ಪಾಲಿಕೆಯ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರವರ ನಿರ್ದೇಶನಗಳನ್ನು ಅನುಷ್ಠಾನಗೊಳಿಸಲು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಉಲ್ಲೇಖ (1)ರಂತೆ ನಿಗದಿಪಡಿಸಲಾದ ರಸ್ತೆಗಳ ಅಗೆತದ ಶುಲ್ಕವನ್ನು, ರಸ್ತೆ ಹಾಗೂ ಪಾದಚಾರಿ ಮಾರ್ಗಗಳನ್ನು ಅಗೆಯಲು ಅನುಮತಿ ನೀಡುವ ಸಂಧರ್ಭದಲ್ಲಿ ಪಡೆಯುವ ಶುಲ್ಕಗಳನ್ನು ಪಾಲಿಕೆಯ ಆಯಾ ವಲಯದ ವಿಭಾಗೀಯ ಕಾರ್ಯಪಾಲಕ ಅಭಿಯಂತರರ ಖಾತೆಗೆ ನೇರವಾಗಿ ಪಾವತಿಸಿಕೊಂಡು ರಸ್ತೆ ಹಾಗೂ ಪಾದಚಾರಿ ಮಾರ್ಗಗಳನ್ನು ಅಗೆಯಲು ಅನುಮತಿ ನೀಡುವುದು.

ಈ ರೀತಿ ಕಾರ್ಯಪಾಲಕ ಅಭಿಯಂತರರ ಖಾತೆಗೆ ಜಮೆಯಾದ ಮೊತ್ತದಲ್ಲಿ ಪಾದಚಾರಿ ಮಾರ್ಗ ಹಾಗೂ ರಸ್ತೆಗಳನ್ನು ಪುನರ್‌ನಿರ್ಮಾಣ ಮಾಡಲು ಅಗತ್ಯ ತಾಂತ್ರಿಕ ಅಂಶಗಳೊಂದಿಗೆ ಅಂದಾಜು ಪಟ್ಟಿಯನ್ನು (ಪ್ರತಿ ಬಾರಿಗೆ ರೂ. 5.00 ಲಕ್ಷಗಳನ್ನು ಮೀರದಂತೆ) ತಯಾರಿಸಿಕೊಂಡು, ಈಗಾಗಲೇ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯ

ಅನ್ವಯ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಗಳೊಂದಿಗೆ ಸದರಿ ಕಾಮಗಾರಿಗಳನ್ನು ತುರ್ತು ಕಾಮಗಾರಿಗಳೆಂದು ಘೋಷಿಸಿ, ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಆದೇಶಿಸಿದೆ ಹಾಗೂ ಈ ಸಂಬಂಧ ಅಂದಾಜುಪಟ್ಟಿಗಳಿಗೆ ವಲಯ ಮಟ್ಟದಲ್ಲೇ ಸಂಬಂಧಪಟ್ಟ ಸಹಾಯಕ ನಿಯಂತ್ರಕರು (ಹಣಕಾಸು) ರವರು ಜಾಬ್ ಸಂಖ್ಯೆ ನೀಡಲು ಅನುಮತಿ ನೀಡಿದೆ.

ಮುಂದುವರೆದು, ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಸಂಗ್ರಹಿಸಲ್ಪಟ್ಟ ಹಣ ಸದ್ಬಳಕೆಯಾಗುವ ಬಗ್ಗೆ ನಿಗಾವಹಿಸುವ ದೃಷ್ಟಿಯಿಂದ ಹಣ ಸಂಗ್ರಹಣೆ ಹಾಗೂ ಸದ್ಬಳಕೆಯ ಕ್ರೋಢೀಕೃತ ವರದಿಯನ್ನು ಪ್ರತಿ ಮಾಹೆ ಸಂಬಂಧಪಟ್ಟ ವಲಯದ ಸಹಾಯಕ ನಿಯಂತ್ರಕರು (ಹಣಕಾಸು)ರವರು ಪ್ರಧಾನ ಅಭಿಯಂತರರ ಮುಖೇನ ಅಪರ ಆಯುಕ್ತರು (ಹಣಕಾಸು)ರವರಿಗೆ ಕಳುಹಿಸುವುದು. ಸಂಗ್ರಹಿಸಲ್ಪಟ್ಟ ಶುಲ್ಕ ಹಾಗೂ ಬಳಕೆಯಾದಂತಹ ಮೊತ್ತಕ್ಕೆ ತಾಳೆಯಾಗುವಂತಿರಬೇಕು ಇದರಲ್ಲಿ ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರುಗಳನ್ನೇ ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು</u>,

1) ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ಮಾನ್ಯ ಉಪಮಹಾಪೌರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3) ವಿಶೇಷ/ಅಪರ ಆಯುಕ್ತರು (ಯೋಜನೆ)ರವರಿಗೆ ಕಳುಹಿಸಿದೆ.
4) ಅಪರ ಆಯುಕ್ತರು (ಹಣಕಾಸು)ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
5) ಪ್ರಧಾನ ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6) ಅಪರ ಆಯುಕ್ತರು (ಆಡಳಿತ)ರವರಿಗೆ ಕಳುಹಿಸಿದೆ.
7) ಕೌನ್ಸಿಲ್ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರುಗಳಿಗೆ ಕಳುಹಿಸಿಕೊಡಲು ಕೋರಿದೆ.
8) ಎಲ್ಲಾ ವಲಯ ಅಪರ / ಜಂಟಿ ಆಯುಕ್ತರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9) ಎಲ್ಲಾ ವಲಯ ಮುಖ್ಯ ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10) ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಉಪ ನಿಯಂತ್ರಕರು (ಹಣಕಾಸು)ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11) ಎಲ್ಲಾ ವಲಯ ಸಹಾಯಕ ನಿಯಂತ್ರಕರು (ಹಣಕಾಸು)ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12) ಜಂಟಿ ನಿರ್ದೇಶಕರು (ನಗರ ಯೋಜನೆ- ಉತ್ತರ / ದಕ್ಷಿಣ)ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
13) ಕೇಂದ್ರ ಕಛೇರಿಯ ಡಕ್ಟ್ ವಿಭಾಗ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
14) ಎಲ್ಲಾ ವಲಯದ ಸಹಾಯಕ ನಿರ್ದೇಶಕರು (ನಗರ ಯೋಜನೆ)ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
15) ಎಲ್ಲಾ ವಲಯ ಕಾರ್ಯಪಾಲಕ ಅಭಿಯಂತರರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
16) ಎಲ್ಲಾ ವಲಯ ಸಹಾಯಕ ಕಾರ್ಯಪಾಲಕ ಅಭಿಯಂತರರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
17) ಸಂಬಂಧಪಟ್ಟವರಿಗೆ. IT Advisor BBMP.
18) ಕಛೇರಿ ಕಡತಕ್ಕೆ.